ಎನ್ವಿ

# ಶಾಜಿ ಕಣ್ಣಿನ ಕ್ಯಾಮೆರಾ ಲೆನ್ಸ್



ತಮ್ಮ ಕಣ್ಣಲ್ಲಿ ಕ್ಯಾಮೆರಾ ಲೆನ್ಸ್ ಇತ್ತೆನ್ನಿಸುತ್ತದೆ ಎಂದು ಯಾರಿಗಾದರೂ ಅನಿಸುವುದು ವಿರಳ. ಶಾಜಿ ಎನ್. ಕರುಣ್ ಉರುಫ್ ಶಾಜಿ ನೀಲಕಂಠನ್ ಕರುಣಾಕರನ್ ಅವರಿಗೆ ಹಾಗೆ ಅನ್ನಿಸಿತ್ತು. ಮಲೆಯಾಳಂ ಚಿತ್ರರಂಗದ ವಿಷಯದಲ್ಲಿ ಸಿನಿಶಿಲ್ಪದ ಪ್ರಸ್ತಾಪ ಬಂದಾಗಲೆಲ್ಲ ಕೇಳಿಬರುವ ಪ್ರಾತಃಸ್ಮರಣೀಯರಲ್ಲಿ ಅವರೂ ಒಬ್ಬರು. ಒಮ್ಮೆ ತಮ್ಮ ಕಣ್ಣಿನ ಕ್ಯಾಮೆರಾ ಕಥೆಯನ್ನು ಹೇಳಿಕೊಂಡಿದ್ದರು.

ಕೇರಳದ ಕೊಲ್ಲಂ ಜಿಲ್ಲೆಯ ಹಳ್ಳಿಯೊಂದರ ಕುಡಿ ಶಾಜಿ. ಅವರ ಮನೆಯಿಂದ ಅನತಿ ದೂರದಲ್ಲಿ ಬಚ್ಚಲುಮನೆ ಇತ್ತು. ಕಾಲಕ್ಕೆ ತಕ್ಕಂತೆ ಹಕ್ಕಿಗಳು ಹಾಡುವುದು ಆ ಪರಿಸರದಲ್ಲಿ ಇದ್ದೇ ಇತ್ತು. ಆದರೆ, ಕಪ್ಪೆಗಳು ವಟಗುಟ್ಟುವ ಸದ್ದು ಅವರನ್ನು ಹೆಚ್ಚು ಕಾಡುತ್ತಿತ್ತು. ಬಾಲ್ಯದಲ್ಲಿ ಅವರು ಬಚ್ಚಲುಮನೆ ಕಡೆ ಯಾರೇ ಹೋದರೂ ಕುತೂಹಲಿ ಆಗುತ್ತಿದ್ದರು. ಖುದ್ದು ತಾವು ಅಲ್ಲಿಗೆ ಹೋದಾಗಲಂತೂ ಅದು ತಪಸ್ಸಿನ ಜಾಗದಂತೆ. ಅವರು ಬೇರೆ ಬೇರೆ ಬೆಳಕಿನಲ್ಲಿ, ಕತ್ತಲಿನಲ್ಲಿ ಬಚ್ಚಲುಮನೆಯನ್ನು ಗಮನಿಸುತ್ತಿದ್ದರು. ಒಂದೊಂದು ಸಲವೂ ಅದು ಬೇರೆಯದೇ ಎಂಬಂತೆ ಅವರಿಗೆ ಕಾಣುತ್ತಿತ್ತು. ಬಚ್ಚಲುಮನೆಗೆ ಯಾವುದೋ ಹುಳ ಹುಪ್ಪಟೆ ಹೊಕ್ಕರಂತೂ ಮುಗಿಯಿತು. ಮನುಷ್ಯನ ಪೀಕಲಾಟ ಜೀವಗೊಳ್ಳುತ್ತಿತ್ತು. ಇವೆಲ್ಲವನ್ನೂ ತಮ್ಮ ಕ್ಯಾಮೆರಾ ಕಣ್ಣು ಗಮನಿಸುತ್ತಿತ್ತು ಎಂದಿದ್ದರು ಶಾಜಿ.

‘ಪೀಕಲಾಟ ಜೀವಗೊಳ್ಳುವುದು’ ಎಂದು ಅವರು ಹೇಳಿದ್ದ ನುಡಿಗಟ್ಟು ಸಿನಿಮಾಕರ್ಮಿಯೊಬ್ಬ ದೃಶ್ಯ ಕಟ್ಟುವ ಬಗೆಗೆ ಕನ್ನಡಿ ಹಿಡಿದಿತ್ತು. ಪೀಕಲಾಟವನ್ನು ಅವರು ಭಾವವಿದ್ಯಮಾನ ಎಂದೇ ಬಣ್ಣಿಸಿದ್ದರು.

ಶಾಜಿ ತಮ್ಮ ಈ ಕ್ಯಾಮೆರಾ ಕಣ್ಣು ಇಟ್ಟುಕೊಂಡೇ **FTII (Film and Television Institute of India)**ನಲ್ಲಿ ಡಿಪ್ಲೊಮಾ ಮಾಡಿದರು. 1971ರಲ್ಲಿ ಅವರು ಆ ಸಂಸ್ಥೆಗೆ ವಿದ್ಯಾರ್ಥಿಯಾಗಿ ಕಾಲಿಟ್ಟಿದ್ದರು. ಮೂರು ವರ್ಷಗಳ ನಂತರ ‘ಜೆನೆಸಿಸ್’ ಶೀರ್ಷಿಕೆಯ ಡಿಪ್ಲೊಮಾ ಫಿಲ್ಮ್ ತಯಾರಿಸಿದರು. ರಾಹುಲ್ ದಾಸ್ ಗುಪ್ತ ನಿರ್ದೇಶನದ ಆ ಫಿಲ್ಮ್‌ನ ಕ್ಯಾಮೆರಾ ಕಣ್ಣು ಶಾಜಿ ಅವರದ್ದು. ಅದಕ್ಕೆ ಅನೇಕ ಪ್ರಶಸ್ತಿಗಳು ಹುಡುಕಿಕೊಂಡು ಬಂದವು.

ಅಹಮದಾಬಾದ್‌ನ ಇಸ್ರೋದಲ್ಲಿ ಕೆಲ ಕಾಲ ಅವರು ಕೆಲಸ ಮಾಡಿದರು. ಮುಂಬೈ ಟಿ.ವಿ. ಹಾಗೂ ಮದ್ರಾಸ್ ಚಿತ್ರರಂಗದಲ್ಲಿ ಸ್ವಲ್ಪ ಸಮಯ ಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸಿದರು. 1975ರಲ್ಲಿ ಕೇರಳ ಫಿಲ್ಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಶುರು ಆಗಲಿಕ್ಕೆ ಮಾತುಕತೆ ನಡೆದಿತ್ತು. ಪಿ.ಆರ್.ಎಸ್. ಪಿಳ್ಳೈ ಅದರ ಸಂಸ್ಥಾಪಕ ಅಧ್ಯಕ್ಷರು. ಜಿ. ವಿವೇಕಾನಂದನ್ ಕಾರ್ಯನಿರ್ವಾಹಕ ನಿರ್ದೇಶಕ. ಅವರಿಗೆ ಶಾಜಿ ಸಲಹೆ ಮುಖ್ಯವಾಗಿತ್ತು. ಅವರನ್ನು ಸಿನಿಮಾ ಆಫೀಸರ್ ಆಗಿ ನೇಮಿಸಿಕೊಂಡರು.

ಜಿ. ಅರವಿಂದನ್, ಕೆ.ಜಿ. ಜಾರ್ಜ್, ಎಂ.ಟಿ. ವಾಸುದೇವನ್ ಸಿನಿಮಾಗಳು ಈಗಲೂ ಚಲನಚಿತ್ರ ವಿದ್ಯಾರ್ಥಿಗಳಿಗೆ ಮುಖ್ಯವಾಗಿವೆ. ಅವುಗಳಲ್ಲಿ ಸಿನಿಮಾಟೋಗ್ರಾಫರ್ ಆಗಿ ಶಾಜಿ ಕೆಲಸ ಮಾಡಿದರು. ಅದರ ಜೊತೆಗೆ ಫಿಲ್ಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಸ್ವರೂಪ ನಿರ್ಧರಿಸುವ ಕಾರ್ಯ. ಮದ್ರಾಸ್‌ನಲ್ಲಿ ನೆಲೆಗೊಂಡಿದ್ದ ಮಲೆಯಾಳಂ ಚಿತ್ರರಂಗವನ್ನು ಕೇರಳಕ್ಕೆ ತರುವಲ್ಲಿ ಕೆಲಸ ಮಾಡಿದ ಮೆದುಳುಗಳಲ್ಲಿ ಶಾಜಿ ಅವರದ್ದು ಪ್ರಮುಖ. ಸಂಕಟ, ತಲ್ಲಣಗಳನ್ನು ರೂಪಕಗಳ ಮೂಲಕ ಹೇಳುವುದು ತಮ್ಮ ಉದ್ದೇಶ ಆಗಿತ್ತೆಂದು ಶಾಜಿ ಅನೇಕ ಸಲ ಹೇಳಿದ್ದಾರೆ.

ನಿರ್ದೇಶಕರಾಗಿ ಮೊದಲ ಸಿನಿಮಾ ‘ಪಿರವಿ’ಯಲ್ಲಿ ಅವರು ತಲ್ಲಣದ ಕಥಾನಕವನ್ನೇ ಕಟ್ಟಿಕೊಟ್ಟರು. ಕಾನ್ ಚಲನಚಿತ್ರೋತ್ಸವದಲ್ಲಿ ಕ್ಯಾಮೆರಾ ಡಿ ಒರ್ ಮನ್ನಣೆಯು ಆ ಚಿತ್ರಕ್ಕೆ ಸಂದಿತು. ಅದಕ್ಕೆ ರಾಷ್ಟ್ರಪ್ರಶಸ್ತಿಯೂ ಒಲಿಯಿತು. ‘ವಾನಪ್ರಸ್ಥಮ್’ ಮಲೆಯಾಳಂ ಚಿತ್ರದಲ್ಲಿ ಅವರು ಮೋಹನ್ ಲಾಲ್ ಅವರನ್ನು ನಾಯಕರನ್ನಾಗಿ ಆರಿಸಿಕೊಂಡರು. ಸ್ಟಾರ್ ಪ್ರಭಾವಳಿ ಇದ್ದರೂ ಕಡಿಮೆ ಸಂಭಾವನೆಗೆ ಶಾಜಿ ನಿರ್ದೇಶನದ ಚಿತ್ರದಲ್ಲಿ ಅಭಿನಯಿಸಲು ಮೋಹನ್ ಲಾಲ್ ಒಪ್ಪಿದ್ದರು. ನಟನೊಬ್ಬನ ತಾಕಲಾಟದ ವಸ್ತುವಿನ ಚಿತ್ರ ಅದು. ‘ಕುಟ್ಟಿ ಸ್ರಾಂಕ್’ ಅವರಿಗೆ ಪ್ರಶಸ್ತಿಗಳನ್ನು ತಂದಿತ್ತ ಮತ್ತೊಂದು ಚಿತ್ರ. ಎಲ್ಲವುಗಳಲ್ಲಿ ಅವರು ಬಾಲ್ಯದಲ್ಲೇ ಕಂಡಿದ್ದ ಪೀಕಲಾಟ, ತಾಕಲಾಟದ ಎಳೆಗಳು ಇದ್ದವು. ಅವರೇ ಹೇಳಿಕೊಂಡಂತೆ ಅದು ಅವರ ಚಿತ್ರಗಳ ಆತ್ಮ. ಅವರ ನಿರ್ದೇಶನದ ಎರಡನೇ ಸಿನಿಮಾ ‘ಸ್ವಾಹಂ’ ಕೂಡ ಇದಕ್ಕೆ ಹೊರತಾಗಿರಲಿಲ್ಲ.

ಸಿನಿಮಾ ನಿರ್ದೇಶಕರಾಗಿ ಮಮ್ಮುಟ್ಟಿ ಅವರನ್ನೂ (ಕುಟ್ಟಿ ಸ್ರಾಂಕ್) ಪ್ರಯೋಗಶೀಲತೆಗೆ ಒಡ್ಡಿದ ಅವರು, 1998ರಲ್ಲಿ ‘ಕೇರಳ ಚಲನಚಿತ್ರ ಅಕಾಡೆಮಿ’ ಪ್ರಾರಂಭವಾದಾಗ ಅದರ ಮೊದಲ ಅಧ್ಯಕ್ಷರಾಗಿ ಆಯ್ಕೆಯಾದರು. ಅದರ ಪರಿಣಾಮವೇ ಕೇರಳ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಬಹುಕಾಲದ ಕನಸು ನನಸಾಗಿದ್ದು. ಭಾರತದ ಬಹುತೇಕ ಚಲನಚಿತ್ರೋತ್ಸವಗಳಿಗೆ ಗುಣಮಟ್ಟದ ವಿಷಯದಲ್ಲಿ ಮಾದರಿಯಾಗಿ ಅದನ್ನು ಶಾಜಿ ರೂಪಿಸಿದರು. 2015ರ ಆವೃತ್ತಿಯ ಚಿತ್ರೋತ್ಸವದ ಸಿನಿಮಾಗಳ ಆಯ್ಕೆ ವಿಶ್ವದರ್ಜೆಯದ್ದು ಎಂದು ಈಗಲೂ ಅನೇಕರು ನೆನೆಯುತ್ತಾರೆ.

ಶಾಜಿ ನಿರ್ದೇಶನದ ‘ಓಳ್’ ಚಿತ್ರವು 2018ರಲ್ಲಿ ಗೋವಾ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಉದ್ಘಾಟನಾ ಚಿತ್ರವಾಗಿ ಪ್ರದರ್ಶನ ಕಂಡಿತ್ತು. ಆಸ್ಟ್ರಿಯಾ ಚಿತ್ರೋತ್ಸವಕ್ಕೆ ಕೂಡ ಹೋಗಿತ್ತು. ತಾವು ನೀರೆರೆದಿದ್ದ ಕೇರಳ ಸ್ಟೇಟ್ ಫಿಲ್ಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಅಧ್ಯಕ್ಷರಾಗಿ 2022ರಿಂದ ಅವರು ಎರಡು ವರ್ಷ ಕಾರ್ಯನಿರ್ವಹಿಸಿದ್ದರು.

ಹೊಸಕಾಲದ ಚಿತ್ರಗಳ ಹಿಂಸಾವಿನೋದ ಅವರಿಗೆ ಹಿಡಿಸುತ್ತಿರಲಿಲ್ಲ. ತಾವೇ ನಿರ್ದೇಶಿಸಿದ ನಟರು ಅಂತಹ ಸಿನಿಮಾಗಳಲ್ಲಿ ಪಾತ್ರ ಮಾಡಿದಾಗಲೂ ನಿರ್ಭಿಡೆಯಿಂದ ಟೀಕೆ ಮಾಡುತ್ತಿದ್ದರು. ಕಳೆದ ಎಂಟು ವರ್ಷಗಳಲ್ಲಿ ಜನಪ್ರಿಯ ಸಿನಿಮಾ ಹೊರಳಿದ ಬಗೆಯನ್ನೂ ಅವರು ಅಚ್ಚುಕಟ್ಟಾಗಿ, ವಿಶ್ಲೇಷಣಾತ್ಮಕವಾಗಿ ವಿಮರ್ಶೆ ಮಾಡುತ್ತಿದ್ದರು. ಮೊನ್ನೆ ಅವರು ಅನಾರೋಗ್ಯದಿಂದ ಕಣ್ಮುಚ್ಚಿದಾಗ 73 ವರ್ಷಗಳ ಸಾರ್ಥಕ ಬದುಕು ಅಂತ್ಯಗೊಂಡಿತು.

ಪ್ರತಿಕ್ರಿಯಿಸಿ: **feedback@sudha.co.in**